ಮತ್ತು ನಿಮ್ಮ ಕುಟುಂಬದ ಒಬ್ಬ ಸದಸ್ಯನ ರೀತಿ ಯಾವುದೇ ಭೇದ ಭಾವಗಳಿಲ್ಲದೆ ನನ್ನೊಂದಿಗೆ ವರ್ತಿಸಿದಿರಿ. ಆ ಸಮಯದಲ್ಲಿ ನಾನು ಭಗವಾನ್ ಶಂಕರನಿಗೆ ಪ್ರಾರ್ಥಿಸಿದ್ದೆ – ಮುಂದೆ ಯಾವಾಗ ಲಾದರೂ ನನ್ನ ನಿರ್ಗತಿಕತನ ದೂರವಾಗಿ ನನ್ನಲ್ಲಿ ಸ್ವಲ್ಪ ಹಣ ವೇನಾದರೂ ಒದಗಿದರೆ, ಆಗ ನಿಮ್ಮ ಸೇವೆಗಾಗಿ ಸ್ವಲ್ಪ ಏನಾದರೂ ಕಳಿಸಿ ಆತ್ಮಸಂತೋಷಪಡುತ್ತೇನೆ ಎಂದು. ಈಗ ಭಗವಂತನ ಕೃಪೆ ಯಿಂದ ನನ್ನ ಹತ್ತಿರ ಸಾಕಷ್ಟು ಜಮೀನುಗಳಿವೆ ಮತ್ತು ಈಗ ಎರಡು ವರ್ಷಗಳಿಂದ ಒಳ್ಳೆಯ ಫಸಲೂ ಬರುತ್ತಿದೆ. ಹಾಗಾಗಿ ನಿಮ್ಮ ಸೇವೆ ಯಲ್ಲಿ ಈ ಹತ್ತು ಮಣ ಗೋಧಿಯನ್ನು ಕಳಿಸುತ್ತಿದ್ದೇನೆ. ಅದನ್ನು ದಯಮಾಡಿ ಸ್ವೀಕರಿಸಿ ನನ್ನನ್ನು ಧನ್ಯನನ್ನಾಗಿ ಮಾಡಿ.'' ಹೀಗಿತ್ತು ಆ ಪತ್ರದ ಒಕ್ಕಣೆ.

ಭಕ್ತರು ಹೇಳಿದರು, ''ನಾನು ಹೇಳುತ್ತಿಲ್ಲವೆ, ಶ್ರದ್ಧೆಯಿಡಿ ಅಂತ? ಈ ಸ್ವಾಮೀಜಿಯನ್ನು ಇಲ್ಲಿಗೆ ಕರೆತಂದವನಿಗೆ ಮನೆಯಲ್ಲಿ ಅಕ್ಕಿಯ ಕಾಳು ಇರಲಿಲ್ಲವೆಂದು ತಿಳಿದೇ ಇದೆ. ಏನಾದರೂ ವ್ಯವಸ್ಥೆ ಮಾಡೇ ಮಾಡುತ್ತಾನೆ. ಹಾ, ಈಗ ಹೋಗಿ; ಗೋಧಿ ತೆಗೆದುಕೊಂಡು ಹೋಗಿ, ಶುಚಿ ಮಾಡಿ ಅಡುಗೆ ತಯಾರು ಮಾಡಿ.(ರೈತನಿಗೆ) ಅರೆ ಭಾಯಿ, ಎತ್ತಿಗೆ ಆಹಾರ ಹಾಕು, ನಾಳೆ ವಾಪಸ್ ಹೋಗುವೆ ಯಂತೆ, ಇಂದು ರಾತ್ರಿ ಇಲ್ಲೇ ತಂಗು'' ಎಂದರು. ಅವನು ಪಾಪ, ಸುಮಾರು ಮೂವತ್ತು ಮೈಲಿ ದೂರದಿಂದ ಭಯಂಕರ ಕಾಡಿನ ಮಾರ್ಗವಾಗಿ ಗಾಡಿಯಲ್ಲಿ ಗೋಧಿ ತುಂಬಿಸಿ ತಂದಿದ್ದ.

ಯುವಕ ಮತ್ತು ಎಲ್ಲ ಸ್ತ್ರೀಯರೂ ನಿಶ್ಶಬ್ದವಾಗಿ, ನಿಧಾನವಾಗಿ ಅಲ್ಲಿಂದ ಹೊರಟರು. ಗೋಧಿಯನ್ನು ಶುಚಿ ಮಾಡಿ, ಬೀಸಿ ನಂತರ ರೊಟ್ಟಿಗಳನ್ನು ಮಾಡಬೇಕಿತ್ತು. ಸಂನ್ಯಾಸಿಯು ಮನಸ್ಸಿನಲ್ಲೇ ಭಕ್ತ ರಿಗೆ ನಮಸ್ಕರಿಸಿದ – ಧನ್ಯರು ಇವರು; ಈ ಒಬ್ಬ ಭಕ್ತನ ದರ್ಶನ ದಿಂದಲೇ ಕಾಥಿಯಾವಾಡಾ ಸುತ್ತಾಡಿದ್ದು ಸಫಲವಾಯಿತೆಂದು ಮನಸ್ಸಿನಲ್ಲೇ ಆನಂದವನ್ನು ಹೊಂದಿದ.

ಸಂಜೆಯ ಕೃತ್ಯಗಳನ್ನೆಲ್ಲ ಮುಗಿಸಿ, ದೀಪ ಹಚ್ಚುವ ವೇಳೆಗೆ ಅವನು ಮತ್ತೆ ಭಕ್ತರ ಮನೆಯಲ್ಲಿ ಹಾಜರಾದ. ಮನೆಯ ದೇವ ರಾದ ಶ್ರೀರಾಮಚಂದ್ರರ ಆರತಿ ಆಯಿತು. ಮನೆಯ ಎಲ್ಲ ಸದ ಸ್ಯರೂ ಒಟ್ಟುಗೂಡಿ ಪ್ರಾರ್ಥನೆ ಸಲ್ಲಿಸಿ ನಮಸ್ಕರಿಸಿದರು, ಹೊರ ಡಲು ಪ್ರಾರಂಭಿಸಿದರು. ಆಗ ಭಕ್ತರು ತಡೆದರು. ''ಹಾ, ನೀವೆಲ್ಲ ಆ ಸಮಯದಲ್ಲಿ ಬಂದಿದ್ದಿರಿ, ಏನು ವಿಷಯ? ನಿಮಗೇನು ಬೇಕು? ಈಗ ಹೇಳಿ.'' ಎಲ್ಲರೂ ಲಜ್ಜಿತರಾಗಿ ಮೌನದಿಂದ ಕುಳಿತರು.

ಭಕ್ತರು ಹೇಳಿದರು: ''ನಾನು ಹೇಳುತ್ತಲೇ ಇದ್ದೆ, ಪ್ರಾರ್ಥ ನೆಯ ನಂತರ ಮಾತಾಡುತ್ತೇನೆ ಅಂತ. ಹಾ, ಈಗ ಹೇಳಿ, ಏನು ಇಚ್ಛಿಸುತ್ತೀರಿ? ನನ್ನ ನಡವಳಿಕೆ ಕೆಟ್ಟದಾಗಿದೆ ಎಂಬುದಂತೂ ನಿಜ, ನಾನು ಯಾರಿಗೂ 'ಇಲ್ಲ' ಎಂದು ಹೇಳುವುದಿಲ್ಲ, ಅಥವಾ 'ಹೋಗಿ' ಎಂದೂ ಹೇಳುವುದಿಲ್ಲ. ಇದರಿಂದ ನಿಮಗೆಲ್ಲ ತುಂಬ ಕಷ್ಟವಾಗು ತ್ತದೆ, ಹಾಗಾಗಿ ಮುಂದೆ ಈ ರೀತಿ ಆಗದ ಹಾಗೆ ವ್ಯವಸ್ಥೆ ಮಾಡ ಬೇಕು. ನೀವೆಲ್ಲ ಹೊಲ–ಗದ್ದೆ ಉಳುವುದು ಇತ್ಯಾದಿ ಕೆಲಸಗಳನ್ನೆಲ್ಲ ನಿಭಾಯಿಸುತ್ತೀರಿ. ನಿಮ್ಮಗಳ ಭಾಗದ ಎಷ್ಟು ಬೆಲೆಯಿರುತ್ತದೋ, ಅದನ್ನು ನೀವು ಬೇರೆಯೇ ಇಟ್ಟುಕೊಳ್ಳಿ. ಆಗ ಈ ರೀತಿಯ ತೊಂದರೆ ಆತಂಕ ಏನೂ ಇರದು, ಅಲ್ಲವೆ? ನಿಮಗೆಲ್ಲ ಅದು ಇಷ್ಟ ತಾನೆ?''

ಯುವಕ ತಲೆ ಅಲ್ಲಾಡಿಸಿ ಕಣ್ಣಲ್ಲಿ ನೀರು ತುಂಬಿಕೊಂಡ.

ಭಕ್ತರು ಹೇಳಿದರು ''ಹಾಗಾದರೆ ಸರಿ, ಇಂದಿನಿಂದ ನೀನು ಹಾಗೇ ಮಾಡು ಮತ್ತು ನನ್ನ ಭಾಗ ಎಷ್ಟು ಸಮಂಜಸವೋ ಅದನ್ನು (ಒಂದು ಸಣ್ಣಕೊಠಡಿಯತ್ತ ಕೈ ತೋರಿಸಿ) ಇದರಲ್ಲಿ ಇಟ್ಟುಬಿಡು. ಮತ್ತು ನೀವು ಬಾಯಿಯವರೇ, ನೀವೂ ನಿಮ್ಮ ನಿಮ್ಮ ಉಚಿತವಾದ ಒಳ್ಳೆಯ ಭಾಗಗಳನ್ನು ಬೇರೆ ಬೇರೆ ಇಟ್ಟುಕೊಳ್ಳಿ, ಅನ್ನಕ್ಕೆ ಅಭಾವ ವಾಗದಿರುವ ಹಾಗೆ. ಮತ್ತೆ ಇನ್ನೇನನ್ನು ಇಚ್ಛಿಸುತ್ತೀರಿ?''

(ಮಹಿಳೆಯರಲ್ಲಿ ಭಕ್ತರ ಸಹಧರ್ಮಿಣಿ, ಒಬ್ಬ ವಿಧವಾ ಕನ್ಯೆ ಮತ್ತು ಸೋದರಿಯೂ ಇದ್ದರು) ಎಲ್ಲರೂ ಸ್ತಬ್ಧರಾಗಿ, ಕಣ್ಣೀರು ಸುರಿಸಲು ಪ್ರಾರಂಭಿಸಿದರು.

''ಯಾಕೆ ಅಳುತ್ತಿದ್ದೀರಿ? ನೀವೇ ತಾನೇ ಇನ್ನು ಮುಂದೆ ಒಟ್ಟಿಗೆ ಇರಲು ಕಷ್ಟವಾಗುತ್ತದೆ ಅಂತ ಹೇಳಿದಿರಿ? ಈಗಂತೂ ಒಟ್ಟಿಗೇ ಇದ್ದೇವೆ; ಕೇವಲ ಒಳ್ಳೆಯ ಭಾಗವಷ್ಟೇ ಪಾಲುದಾರಿಕೆಯಾಗಿದ್ದು, ಈಗ ನಿಶ್ಚಿಂತರಾಗಿರಿ. ಆ ವಿಷಯದಲ್ಲಿ ನನ್ನ ಕಡೆಯಿಂದ ಯಾವುದೇ ತೊಂದರೆಯಾಗುವುದಿಲ್ಲ, ಬಾಕಿ ಎಲ್ಲ ಪರಮೇಶ್ವರನ ಅಧೀನ. (ಎಲ್ಲರೂ ಎದ್ದು ಹೊರಡುವ ಸಮಯದಲ್ಲಿ) ಹಾ, ತಾಳಿ, ಒಂದು ಮಾತು ಉಳಿದಿದೆ. ಇಂದಿನಿಂದ ನಾನು ನನ್ನ ಕೈಯಾರೆ ನಿಮ್ಮಗಳ ಭಾಗದಿಂದ ಒಂದು ಕಾಳನ್ನೂ ತೆಗೆದುಕೊಳ್ಳುವುದಿಲ್ಲ. ಆದರೆ ನಿಮಗೆ ಯಾವಾಗಲಾದರೂ ಆವಶ್ಯಕತೆ ಬಿದ್ದರೆ, ನನಗೆ ಹೇಳುವುದೂ ಬೇಡ, ನನ್ನ ಭಾಗದಿಂದ ನಿಮಗೆಷ್ಟು ಬೇಕೋ ನಿಮ್ಮ ಕೈಯಾರೆ ತೆಗೆದುಕೊಳ್ಳಬಹುದು.''

ಎಲ್ಲರೂ ಕಣ್ಣೀರು ಸುರಿಸುತ್ತ ಒಳಗೆ ಹೋದರು, ಸಂನ್ಯಾ ಸಿಯು ವಿಸ್ಮಯ–ಮುಗ್ಧನಾಗಿ ನೋಡಿದ – ಐದೇ ನಿಮಿಷದಲ್ಲಿ ಸಂಪತ್ತಿನ ಪಾಲುದಾರಿಕೆ ಆಗಿಹೋಯಿತು. ಧನ್ಯರೇ ನೀವು, ಭಕ್ತ ರಾಜ ಜಗಜೀವನರಾಮ್ ಜೀ! ಭಕ್ತರ ನಡತೆಯು ನಿಜಕ್ಕೂ ಅಸ್ತು!

ಎಲ್ಲರೂ ಕೂಡಿ ಸಂನ್ಯಾಸಿಯನ್ನು ಸುಮಾರು ೧೫ ದಿನಗಳ ಕಾಲ ಇರಿಸಿಕೊಂಡರು, ವಿಶೇಷವಾಗಿ ಭಕ್ತ ಮಹಾಶಯರು. ಅವರು ಪೂರ್ಣವಾಗಿ ರಾಮಾಯಣದಲ್ಲಿ ತಮಗೆ ಕಠಿಣವೆನಿಸಿದ ಅಂಶಗಳನ್ನು ಸರಿಯಾಗಿ ತಿಳಿದುಕೊಂಡ ಮೇಲೆಯೇ ಸಂತುಷ್ಟರಾಗಿ ಬೀಳ್ಕೊಟ್ಟರು. ಜೊತೆಗೆ, ''ಇಲ್ಲಿಗೆ ಬಂದು ನೆಲೆಸಿರಿ, ನನ್ನ ಹೊಲ ದಲ್ಲಿ ಒಂದು ಗುಡಿಸಲು ಮಾಡಿ ಕೊಡುತ್ತೇನೆ. ಆನಂದದಿಂದ ಭಜನೆ ಮಾಡಿ, ನಾವು ನಿಮ್ಮ ಸೇವೆ ಮಾಡುತ್ತೇವೆ'' ಎಂದರು.

ಮನೆಯ ಎಲ್ಲರೂ ಸಂನ್ಯಾಸಿಯೊಂದಿಗೆ ಮನೆಯ ಮತ್ತು ಆಚೀಚೆ ವಿಚಾರಗಳನ್ನು ಮಾತಾಡಿದರು, ಆದರೆ ಭಕ್ತ ಮಹಾ ಶಯರು ಒಂದು ದಿನವೂ ಅಂಥ ಚರ್ಚೆಯನ್ನು ಮಾಡಲೇ ಇಲ್ಲ. ಮೊದಲ ದಿನದ ಚರ್ಚೆಯ ಬಗ್ಗೆ ಪ್ರಸ್ತಾಪವನ್ನೂ ಮಾಡಲಿಲ್ಲ. ನಿಜಕ್ಕೂ ಧನ್ಯರೇ, ಭಕ್ತ ಮಹಾಶಯ ಜಗಜೀವನರಾಮ ಜೀ! ✱

# ಭಾರತದಲ್ಲಿ ಗುರುವಿನ ಮಹತ್ವ

ವಿರಾಜ ಮಂಗಲಗಿ



ಭಾರತೀಯ ಸಂಸ್ಕೃತಿಯಲ್ಲಿ ಗುರುವನ್ನು ಅತ್ಯುನ್ನತ ಸ್ಥಾನದಲ್ಲಿ ಇರಿಸಿ ಪೂಜಿಸಲಾಗುತ್ತದೆ. ಗುರುವಿನ ಆರಾಧನೆ, ಗುರುಭಕ್ತಿ, ಗುರುವಿನ ಮೇಲೆ ಗೌರವ-ಪ್ರೀತಿ ಇವು ಶ್ರೇಷ್ಠ ಮೌಲ್ಯಗಳು. ಗುರುಪೂರ್ಣಿಮೆಯ ಹಿನ್ನೆಲೆಯಲ್ಲಿ ಈ ವಿಚಾರಗಳನ್ನು ಕುರಿತು ಚಿಂತನೆ ನಡೆಸಿರುವ ಲೇಖಕರು ಗುಲ್ಬರ್ಗಾ ನಿವಾಸಿಗಳು. ರಾಮಕೃಷ್ಣ ಆಶ್ರಮದ ಭಕ್ತರೂ ಆಗಿರುವ ಅವರು ಹಲವಾರು ಬಗೆಯ ಸೇವಾಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

**ಪೀಠಿಕೆ:** ಭಾರತೀಯ ಪರಂಪರೆಯಲ್ಲಿ ಗುರುವಿನ ಸ್ಥಾನ ಅತ್ಯಂತ ಮಹತ್ವಪೂರ್ಣವಾದುದು. ಯಾವುದೇ ಮಹತ್ತರ ಸಾಧನೆಗೆ ಗುರುವಿನ ನಿಖರವಾದ ಮಾರ್ಗದರ್ಶನ, ಗುರುಕೃಪೆ ಅತ್ಯಾವಶ್ಯಕ. ಭಾರತದಲ್ಲಿ ಗುರುವೆಂದರೆ ಕೇವಲ ಮನುಷ್ಯ ಶರೀರ ಧರಿಸಿ ಬಂದ ಸಾಮಾನ್ಯ ವ್ಯಕ್ತಿಯಲ್ಲ, ಸಾಕ್ಷಾತ್ ಭಗವತ್ ಸ್ವರೂಪಿ. ಭಗವಂತ ಸರ್ವಶಕ್ತ, ಸರ್ವವ್ಯಾಪಿ, ಸರ್ವಾಂತರ್ಯಾಮಿಯಾದರೂ, ಗುರುವಿನಲ್ಲಿ ಅವನ ಶಕ್ತಿ ವಿಶೇಷವಾಗಿ ಪ್ರಕಟಣೆಗೊಳ್ಳುತ್ತದೆ. ಗುರುವನ್ನು ಸಾಕ್ಷಾತ್ ಪರಮಾತ್ಮನ ಆವಿರ್ಭಾವವೆಂದು ತಿಳಿಯಪಡಿಸುವ ಸಂಗತಿಗಳು ನಮ್ಮ ಪರಂಪರೆಯ ಉದ್ದಕ್ಕೂ ಹಲವಾರು ಕಥೆಗಳ, ದೃಷ್ಟಾಂತಗಳ ಹಾಗೂ ಜೀವಂತ ನಿದರ್ಶನಗಳ ಮೂಲಕ ಸ್ಪಷ್ಟವಾಗಿ ತಿಳಿದುಬರುತ್ತವೆ. ಆದ್ದರಿಂದಲೇ ಭಾರತದಲ್ಲಿ ಗುರುವನ್ನು –

**ಗುರುಬ್ರಹ್ಮಾ ಗುರುರ್ವಿಷ್ಣುಃ ಗುರುರ್ದೇವೋ ಮಹೇಶ್ವರಃ ।**
**ಗುರುರೇವ ಪರಂಬ್ರಹ್ಮ ತಸ್ಮೈ ಶ್ರೀಗುರವೇ ನಮಃ ॥**

– ಎಂದು ಸ್ತುತಿಸುತ್ತೇವೆ.

ಇಂತಹ ಗುರುಗಳು, ಮಹಾತ್ಮರೂ, ಬ್ರಹ್ಮಚಾರಿಗಳೂ, ತಪಸ್ವಿಗಳೂ ಧರೆಗೆ ಅವತರಿಸಿದ ದಿನ ಆಧ್ಯಾತ್ಮಿಕ ಸಾಧಕರಿಗೆ ಶ್ರೇಷ್ಠವಾದ ದಿನ. ಪೂರ್ಣಿಮೆ ತಿಥಿಯು ಸಾಧಕರಿಗೆ ಅತ್ಯಂತ ಉತ್ಕೃಷ್ಟವೆಂದೂ, ಈ ದಿನದಂದು ಸಾಧಕರು ಮಾಡುವ ಧ್ಯಾನ, ಜಪ, ಪ್ರಾರ್ಥನೆ, ದಾನ, ಸೇವೆ, ವ್ರತ, ಉಪವಾಸ, ಪಾರಾಯಣ, ಪೂಜೆಗಳಿಗೆ ವಿಶೇಷ ಫಲಪ್ರಾಪ್ತಿಯಾಗುವುದು ಎಂಬ ನಂಬಿಕೆಯಿದೆ. ಆಷಾಢ ಮಾಸದ 'ಗುರುಪೂರ್ಣಿಮಾ', ಕಾರ್ತಿಕ ಮಾಸದ 'ಗೌರಿ ಪೂರ್ಣಿಮಾ', ಮಾರ್ಗಶೀರ್ಷ ಮಾಸದ 'ದತ್ತ ಜಯಂತಿ' ಹಾಗೂ ವೈಶಾಖ ಮಾಸದ 'ಬುದ್ಧಪೂರ್ಣಿಮಾ' – ಈ ನಾಲ್ಕು ಮಾಸಗಳು ಸನಾತನ ಸಂಸ್ಕೃತಿಯಲ್ಲಿ ಪರಮೋತ್ಕೃಷ್ಟವೆಂದು ಪರಿಗಣಿಸಲ್ಪಟ್ಟಿವೆ. ಭಾರತದೆಲ್ಲೆಡೆ ಹಲವು ರೀತಿಯಿಂದ ಆಚರಿಸಲ್ಪಡುವ ಗುರುಪೂರ್ಣಿಮೆ ನಮ್ಮ ಸಂಸ್ಕೃತಿಯ ಜ್ಞಾನ, ಭಕ್ತಿ, ಶ್ರದ್ಧೆ, ವಿಶ್ವಾಸಗಳ ದ್ಯೋತಕವಾಗಿದೆ.

## ಗುರುಪೂರ್ಣಿಮೆಯ ಮಹತ್ವ

ಆಷಾಢಮಾಸದ ಪೂರ್ಣಿಮೆಯನ್ನು ವ್ಯಾಸ ಪೂರ್ಣಿಮೆಯೆಂದು ಆಚರಿಸುತ್ತೇವೆ. ವೇದವ್ಯಾಸರ ಜನ್ಮದಿನ. ಇವರು ದ್ವಾಪರಯುಗದ ಅಂತ್ಯದಲ್ಲಿ ಅವತರಿಸಿದರು. ವ್ಯಾಸರು ವಸಿಷ್ಠ ಮಹರ್ಷಿಗಳ ಪೌತ್ರರು (ಮೊಮ್ಮಗ). ವಸಿಷ್ಠರ ಮಗ ಶಕ್ತಿ, ಶಕ್ತಿಯ ಮಗ ಪರಾಶರ, ಪರಾಶರರ ಮಗ ವ್ಯಾಸ, ವ್ಯಾಸರ ಪುತ್ರ ಶುಕ ಮುನಿ. ಇವರದು ಬ್ರಹ್ಮಜ್ಞಾನಿಗಳ ಪೀಳಿಗೆಯಾಯಿತು. ಪರಾಶರರ ತಪಸ್ಸಿನಿಂದ ಸಂಪ್ರೀತನಾದ ಶಿವ ಅವರನ್ನು ಆಶೀರ್ವದಿಸಿದನು. ಶಿವನ ಆಶೀರ್ವಾದದಿಂದ ಜನಿಸಿದವರು ವ್ಯಾಸರು. ಇವರಿಗೆ ಹಲವು ಹೆಸರುಗಳಿವೆ.

೧) ವಸಿಷ್ಠ ವಂಶದಲ್ಲಿ ಜನ್ಮತಾಳಿದ್ದರಿಂದ ವಾಸಿಷ್ಠ.

೨) ಪರಾಶರರ ಸುಪುತ್ರರು. ಆದ್ದರಿಂದ ಪರಾಶರ.

೩) ವೇದಗಳ ಅನಂತ ಜ್ಞಾನರಾಶಿಯನ್ನು ನಾಲ್ಕು ಭಾಗಗಳನ್ನಾಗಿ ವಿಭಾಗೀಕರಣ ಮಾಡಿದ್ದರಿಂದ ವೇದವ್ಯಾಸರು.

೪) ಬದರೀಕ್ಷೇತ್ರದಲ್ಲಿ ದೀರ್ಘಕಾಲ ತಪಸನ್ನಾಚರಿಸಿ, ಭಗವಂತನ ಅನುಗ್ರಹವನ್ನು ಪಡೆದು ಬಾದರಾಯಣರಾದರು.

೫) **ವ್ಯಾಸಾಯ ವಿಷ್ಣುರೂಪಾಯ ವ್ಯಾಸರೂಪಾಯ ವಿಷ್ಣವೇ ।**
**ನಮೋ ವೈ ಬ್ರಹ್ಮ ನಿಧಯೇ ವಾಸಿಷ್ಠಾಯ ನಮೋ ನಮಃ ॥**

– ಎಂದು ಅವರನ್ನು ಸ್ತುತಿಸಲಾಗಿದೆ. ಶ್ರೀಮದ್ ಭಾಗವತವೂ ವ್ಯಾಸರನ್ನು ಸಾಕ್ಷಾತ್ ವಿಷ್ಣುವಿನ ಅವತಾರವೆಂದು ಹೇಳಲ್ಪಟ್ಟಿದ್ದರಿಂದ ಅವರಿಗೆ'ವಿಷ್ಣುಕಲೋದ್ಭವ' ಎಂದು ಹೆಸರು.

೬) ಅವರು ಶ್ಯಾಮಲವರ್ಣದವರಾದ್ದರಿಂದ 'ಕೃಷ್ಣನೂ' ಯಮುನಾ ನದಿಯ ದ್ವೀಪದಲ್ಲಿ ಜನಿಸಿದುದರಿಂದ 'ದ್ವೈಪಾಯನ' ಆದರು.

ಸನಾತನ ಧರ್ಮ ಸಂರಕ್ಷಣೆ, ಸನಾತನ ಧರ್ಮಪ್ರಚಾರಕ್ಕೆ ವ್ಯಾಸರ ಕೊಡುಗೆ ಅಮೋಘವಾದುದು. ಕಲಿಯುಗದ ಜನರು ಆಲಸಿಗಳು, ಅಲ್ಪಾಯುಷಿಗಳು ಹಾಗೂ ಪಾಪರತರಾಗಲಿರುವುದನ್ನು ತಮ್ಮ ಭವಿಷ್ಯತ್ ದರ್ಶನದಿಂದ ಕಂಡುಕೊಂಡು ವೇದ

ಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿದ್ದಷ್ಟೇ ಅಲ್ಲ, ಅವನ್ನು ನಾಲ್ವರು ಶಿಷ್ಯರಿಗೆ ಬೋಧಿಸಿದರು. ಋಗ್ವೇದವನ್ನು ಪೈಲನಿಗೆ, ಯಜುರ್ವೇದವನ್ನು ವೈಶಂಪಾಯನನಿಗೆ, ಸಾಮವೇದವನ್ನು ಜೈಮಿನಿಗೆ ಮತ್ತು ಅಥರ್ವಣವೇದವನ್ನು ಸುಮಂತನಿಗೆ ಬೋಧಿಸಿ ವೇದಪರಂಪರೆಯನ್ನು ಅವಿಚ್ಛಿನ್ನವಾಗಿ ಪ್ರವಹಿಸುವಂತೆ ಮಾಡಿದರು. ಶ್ರುತಿಗಳ ತಾತ್ಪರ್ಯ ನಿರ್ಣಯಕ್ಕಾಗಿ 'ಬ್ರಹ್ಮಸೂತ್ರ'ವನ್ನು ರಚಿಸಿ ತತ್ತ್ವಜ್ಞಾನವನ್ನು ವ್ಯವಸ್ಥಿತಗೊಳಿಸಿದರು. ವೇದೋಪನಿಷತ್ತುಗಳು, ಬ್ರಹ್ಮಸೂತ್ರಗಳ ಮಹತ್ವವನ್ನು ಜನಸಾಮಾನ್ಯರಲ್ಲಿ ಪ್ರಚುರಪಡಿಸಲು ೧೮ ಪುರಾಣಗಳನ್ನು ಮತ್ತು ೧೮ ಉಪಪುರಾಣಗಳನ್ನು ರಚಿಸಿದರು. ಮಹಾಕಾವ್ಯಗಳಲ್ಲಿ ಒಂದಾದ, 'ಪಂಚಮವೇದ'ವೆಂದೇ ಕರೆಯಲ್ಪಟ್ಟ ಮಹಾಭಾರತದ ರಚನೆ, ವ್ಯಾಸರ ಒಂದು ಮಹೋನ್ನತವಾದ ಕೊಡುಗೆಯಾಗಿದೆ.

ಆಷಾಢಪೂರ್ಣಿಮೆಯೆಂದು ವ್ಯಾಸರು ತಮ್ಮ ಅವತಾರವನ್ನು ಪರಿಸಮಾಪ್ತಿ ಮಾಡಿದರು ಎಂಬ ಪ್ರತೀತಿಯೂ ಇದೆ. ಅವರು ತಮ್ಮ ಶಿಷ್ಯರಿಗೆ ದೇಹತ್ಯಾಗ ಮಾಡುವ ವಿಷಯವನ್ನು ಮುಂಚಿತವಾಗಿಯೇ ತಿಳಿಸಿದ್ದರಿಂದ, ಅವರೆಲ್ಲರೂ ಬಹಳ ದುಃಖಿತರಾದರು. ಅವರು ಶಿಷ್ಯರನ್ನುದ್ದೇಶಿಸಿ; ''ಮಕ್ಕಳೇ ನನ್ನ ಶರೀರ ತ್ಯಾಗದಿಂದ ನೀವು ಪರಿತಾಪವನ್ನು ಪಡಬೇಕಾಗಿಲ್ಲ. ನನ್ನ ಆತ್ಮವು ದೇಹತ್ಯಾಗವನ್ನು ಮಾಡಿದ ನಂತರವೂ, ಈ ಲೋಕದ ಎಲ್ಲಾ ಜ್ಞಾನಿಗಳನ್ನು ವ್ಯಾಪಿಸಿ ನೆಲೆಸುತ್ತೇನೆ. ನೀವು ಯಾವ ಜ್ಞಾನಿಗಳನ್ನು ಪೂಜಿಸಿದರೂ, ನನ್ನನ್ನೇ ಪೂಜಿಸಿದಂತಾಗುತ್ತದೆ. ಜ್ಞಾನ ಪ್ರಸಾರ ಮಾಡುವವರೆಲ್ಲರೂ ನನ್ನ ಸ್ವರೂಪರೇ.'' ಆದ್ದರಿಂದಲೇ ವ್ಯಾಸಪೂರ್ಣಿಮೆಯನ್ನು 'ಗುರುಪೂರ್ಣಿಮಾ' ಎಂದು ಆಚರಿಸುವ ಪದ್ಧತಿಯಿದೆ. ವ್ಯಾಸರು ಸ್ವಯಂ ಪರಶಿವನಿಂದಲೇ 'ಸರ್ವರಿಗೂ ಗುರು' ಎಂದು ಸನ್ಮಾನಿತರಾದವರು. ಅವರು ಏಳು ಜನ ಚಿರಂಜೀವಿಗಳಲ್ಲಿ ಒಬ್ಬರೆಂದು ಹೇಳಲ್ಪಟ್ಟಿದೆ.

### ಆಚಾರ್ಯದೇವೋಭವ

ಆಷಾಢಮಾಸದ ಹುಣ್ಣಿಮೆ ತುಂಬಾ ಪವಿತ್ರವಾದ ದಿನ. ಗುರುವಿಗೆ ಕೃತಜ್ಞತೆಯನ್ನು ಸಲ್ಲಿಸುವ ದಿನ. ಅಂದು ಪ್ರತಿಯೋರ್ವ ಆಧ್ಯಾತ್ಮಿಕ ಸಾಧಕನೂ ತಾನು ಉಪದೇಶ ಪಡೆದ ಗುರುವಿಗೆ ತನ್ನ ಶಕ್ತ್ಯನುಸಾರ ಫಲ, ಪುಷ್ಪ, ವಸ್ತ್ರ, ಸಿಹಿ ಪದಾರ್ಥ, ಹಾಗೂ ಕಾಣಿಕೆಯನ್ನು ಅರ್ಪಿಸಿ ಕೃತಾರ್ಥನಾಗುತ್ತಾನೆ. ಗುರು ಇಹಲೋಕವನ್ನು ತ್ಯಜಿಸಿದರೆ ತನ್ನ ಇಷ್ಟದೇವತೆಯುಲ್ಲಿ ಗುರುವನ್ನು ಕಂಡುಕೊಂಡು ಭಕ್ತಿಪೂಜೆಯನ್ನು ಸಮರ್ಪಿಸುವ ಮೂಲಕ ಅವರ ಅನುಗ್ರಹವನ್ನು ಪಡೆದು ಸಾಧನಾನಿರತನಾಗುವ ಸಂಪ್ರದಾಯವಿದೆ. ಜನ್ಮಕೊಟ್ಟ ಮಾತಾ-ಪಿತರ ನಂತರದ ಸ್ಥಾನ ಗುರುವಿನದು. **'ಮಾತೃದೇವೋಭವ, ಪಿತೃ ದೇವೋ ಭವ, ಆಚಾರ್ಯದೇವೋ ಭವ'** ಎಂಬ ಉಪನಿಷದ್ವಾಕ್ಯವನ್ನು ಸ್ತುತಿಸುವ ಪರಂಪರೆ ನಮ್ಮದು.

### ಗುರುವಿನ ಆವಶ್ಯಕತೆ

ಮೊದಲನೆಯದಾಗಿ ನಾವು 'ಗುರು' ಎಂದು ಯಾರನ್ನು ಸಂಬೋಧಿಸಬೇಕು? ನಮ್ಮನ್ನು ಹೆತ್ತುಹೊತ್ತು, ಲಾಲನೆ ಪಾಲನೆಗೈದು ಬಾಲ್ಯದಿಂದಲೇ ಸಂಸ್ಕಾರದ ಮುದ್ರೆಯನ್ನೊತ್ತಿದ ತಾಯಿಯು ಗುರು; ಹೆಜ್ಜೆ ಹೆಜ್ಜೆಗೂ ತಮ್ಮ ಜೀವನಾನುಭವದಿಂದ ಮಾರ್ಗದರ್ಶನವನ್ನು ನೀಡಿ ವ್ಯಕ್ತಿತ್ವ ವಿಕಸನಗೊಳ್ಳುವಂತೆ ಮಾಡಿದ ತಂದೆಯೂ ಗುರು; ಅಕ್ಷರವನ್ನು ಕಲಿಸಿದ ಅಧ್ಯಾಪಕನೂ ಗುರು; ತಮ್ಮ ಅಮೂಲ್ಯವಾದ ಮಾತು-ಕೃತಿಗಳಿಂದ, ಕಥೋಪದೇಶಗಳಿಂದ ಪಾಠ ಮಾಡಿದ ಮನೆಯ ಹಿರಿಯರೆಲ್ಲರೂ ಗುರುಗಳೇ; ಕಷ್ಟದುಃಖದ ಸಮಯದಲ್ಲಿದ್ದಾಗ ನಮ್ಮನ್ನು ದಾರಿದೀಪದಂತೆ ಸಲಹೆಗಳನ್ನು ಸೂಚಿಸಿದ ಸ್ನೇಹಿತರೂ ಗುರುಗಳೇ; ನಾವು ಏನನ್ನಾದರೂ ಇತರರಿಂದ ಒಳ್ಳೆಯದನ್ನು ಕಲಿತರೆ ಅವರನ್ನೆಲ್ಲ ಗುರುಗಳೆಂದು ಪರಿಗಣಿಸುತ್ತೇವೆ. ನಮ್ಮ ಜ್ಞಾನವನ್ನು ವೃದ್ಧಿಸುವ ಒಂದು ಪುಸ್ತಕವನ್ನು, ಇತರರ ಜೊತೆಗೂಡಿ ನಡೆಸಿದ ಚಿಂತನ-ಮಂಥನ, ಸತ್ಸಂಗದಿಂದ ಮೈಗೂಡಿಸಿಕೊಂಡ ಸದ್ವಿಚಾರಗಳನ್ನು, ನಾವು ಕೈಗೊಂಡ ಪ್ರವಾಸದಿಂದ ಪಡೆದ ಲೋಕಾನುಭವವನ್ನು, ಪ್ರಕೃತಿಯಿಂದ ಕಲಿತ ಅಮೂಲ್ಯವಾದ ಪಾಠವನ್ನು 'ಗುರು' ಎಂದು ಕರೆಯುತ್ತೇವೆ.

ಅವಧೂತ ದತ್ತಾತ್ರೇಯರು ಪ್ರಕೃತಿಯಲ್ಲಿ ಗುರುತಿಸಿರುವ ೨೪ ಗುರುಗಳ ಕಥೆಗಳನ್ನು ಪ್ರತಿಯೊಬ್ಬ ಸಾಧಕನೂ ಅಧ್ಯಯನ ಮಾಡಲೇಬೇಕು. ಭೂಮಿ, ವಾಯು, ಆಕಾಶ, ಜಲ, ಅಗ್ನಿ, ಚಂದ್ರ, ಸೂರ್ಯ, ಪಾರಿವಾಳ, ಹೆಬ್ಬಾವು, ಸಮುದ್ರ, ಪತಂಗ, ದುಂಬಿ ಅಥವಾ ಜೇನುನೊಣ, ಆನೆ, ಜೇನು ತೆಗೆಯುವವನು, ಜಿಂಕೆ, ಮೀನು, ಪಿಂಗಳಾ ಎನ್ನುವ ವೇಶ್ಯೆ, ಕುರರ ಪಕ್ಷಿ, ಮಗು, ಕುಮಾರಿ, ಬಾಣವನ್ನು ತಯಾರಿಸುವವನು, ಸರ್ಪ, ಜೇಡರ ಹುಳು ಮತ್ತು ಭೃಂಗವೆಂಬ ಕೀಟ; ಇವರೇ ಅವಧೂತರ ೨೪ ಗುರುಗಳು. ಇದನ್ನು ಶ್ರೀಮದ್ಭಾಗವತದ ಏಕಾದಶ ಸ್ಕಂಧದ, ಏಳನೆಯ ಅಧ್ಯಾಯದ ೩೩ ಮತ್ತು ೩೪ ಶ್ಲೋಕಗಳಲ್ಲಿ ಹೇಳಲಾಗಿದೆ. ಮಹಾತ್ಮರು ಕೇವಲ ಒಳಿತಿನಲ್ಲಷ್ಟೇ ಅಲ್ಲ, ಕೆಡುಕಿನಲ್ಲಿಯೂ ಪಾಠವನ್ನು ಕಲಿತು 'ಗುರು'ವೆಂದು ಸ್ವೀಕರಿಸಿದ್ದು ಸ್ವಾರಸ್ಯಕರವಾಗಿದೆ.

ಎಲ್ಲಾ ಭೌತಿಕ ವಿಜ್ಞಾನ, ತಂತ್ರಜ್ಞಾನ, ವೈದ್ಯಕೀಯ, ವಾಣಿಜ್ಯಶಾಸ್ತ್ರ, ಕಲೆಗಳು ಹಾಗೂ ಕರಕುಶಲ ವಿದ್ಯೆಗಳನ್ನು (ಅಪರಾವಿದ್ಯೆ) ಕಲಿಸಿದ ಶಿಕ್ಷಕರು, ಪ್ರಾಧ್ಯಾಪಕರನ್ನು ಗುರುಗಳೆಂದು ಸಂಬೋಧಿಸುತ್ತೇವೆ. ಯಾವುದೇ ಲೌಕಿಕ-ಅಭ್ಯುದಯವೇ ಇರಲಿ ಅಥವಾ ಪಾರಮಾರ್ಥಿಕ ಜ್ಞಾನವೇ ಆಗಲಿ ನಿರ್ದಿಷ್ಟವಾದ ಗುರಿಯನ್ನು ತಲುಪಬೇಕಾದರೆ ಗುರುವಿನ ಆವಶ್ಯಕತೆ ಬಹಳವಿದೆ.

### ಆಧ್ಯಾತ್ಮಿಕ ಜೀವನದಲ್ಲಿ ಗುರುವಿನ ಪಾತ್ರ

ಆಧ್ಯಾತ್ಮಿಕ ಜ್ಞಾನವೆಂಬುದು ನಿತ್ಯವೂ, ನಿರ್ವಿಕಲ್ಪವೂ, ನಿರವಯವೂ, ನಿಷ್ಪ್ರಪಂಚವೂ ಆದ ಜ್ಞಾನಜ್ಯೋತಿ. ಇಂತಹ ಆತ್ಮಜ್ಯೋತಿಯನ್ನು ಪ್ರಕಾಶಪಡಿಸಬೇಕಾದರೆ ಸಾಧಕನಿಗೆ ಪ್ರತಿ ಸ್ತರದಲ್ಲಿಯೂ ಪ್ರಶ್ನೆಗಳು ಕಾಡುತ್ತವೆ. ಅನುಭಾವಿಗಳ ಮಾರ್ಗದರ್ಶನ ಬೇಕಾಗುತ್ತದೆ. ನಮ್ಮ ಪ್ರಶ್ನೆ, ಸಂಶಯಗಳನ್ನು ನಿವಾರಿಸಿ, ಆಧ್ಯಾತ್ಮಿಕ ಪಥದಲ್ಲಿ ಮುನ್ನಡೆಸಬೇಕಾದರೆ ಭಗವತ್ಸಾಕ್ಷಾತ್ಕಾರವನ್ನು ಪಡೆದ ಸದ್ಗುರುವಿನಿಂದ ಮಾತ್ರ ಸಾಧ್ಯವಾಗುವಂಥದ್ದು.